ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	[illegible]
ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ
ಉತ್ತರಿಸುವ ದಿನಾಂಕ:	17.07.2019
ಉತ್ತರಿಸುವವರು	ಮುಜರಾಯಿ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

	ಪ್ರಶ್ನೆ	ಉತ್ತರ
ಅ	ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸರ್ಕಾರಿ ವೇತನ ಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ ನೌಕರರಿಗೆ 6ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿಯನ್ನು ಇದುವರೆವಿಗೂ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಹೌದು ಬಂದಿದೆ.
ಆ	ಹಾಗಿದ್ದಲ್ಲಿ, ಮಂಜೂರಾತಿ ಮಾಡದೆ ವಿಳಂಬ ಮಾಡಲು ಕಾರಣಗಳೇನು; (ವಿವರ ನೀಡುವುದು)	ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 54 ಮುಸೇವಿ 2017 ದಿನಾಂಕ:06.07.2018ರಲ್ಲಿ ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳನ್ನೊಳಗೊಂಡಂತೆ ರಚಿಸಿರುವ ಸಮಿತಿಯು ದಿ:07.12.2018ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಒಟ್ಟು 1111 ಮಂದಿ ದೇವಾಲಯದ ನೌಕರರುಗಳು ಈಗಾಗಲೇ ಸಮೂಹ 'ಸಿ'ಮತ್ತು 'ಡಿ' ವೃಂದದ ಸರ್ಕಾರಿ ನೌಕರರಿಗೆ ನೀಡಲಾಗುವ ವೇತನ ಶ್ರೇಣಿಯನ್ನು ಪಡೆದಿರುತ್ತಾರೆ. ಆದರೆ ಇನ್ನೂ ವೇತನ ಶ್ರೇಣಿ ನಿಗದಿಪಡಿಸಲು ಬಾಕಿ 2,568 ತಾತ್ಕಾಲಿಕ ನೌಕರರಿದ್ದು, ಇವರಿಗೆ ಅನ್ಯಾಯವಾಗದ ರೀತಿ ವೇತನ ತಾರತಮ್ಯವನ್ನು ಸರಿಪಡಿಸುವ ಸಲುವಾಗಿ ಸೂಕ್ತ ವೇತನ ಶ್ರೇಣಿ ನಿಗದಿಪಡಿಸುವ ಸಂಬಂಧ ನಿಯಮ 8ಕ್ಕೆ ತಿದ್ದುಪಡಿ ಮಾಡಲು ಈಗಾಗಲೇ ಸಚಿವ ಸಂಪುಟವು ದಿನಾಂಕ:14.06.2019ರಂದು ಅನುಮೋದನೆ ನೀಡಿರುವುದರನ್ವಯ ನಿಯಮ 8ಕ್ಕೆ ಅಂತಿಮವಾಗಿ ಪ್ರಕಟಣೆ ಹೊರಡಿಸಿ, ವೇತನ ಶ್ರೇಣಿ ನೀಡಲು ಬಾಕಿ ಉಳಿದ ನೌಕರರುಗಳಿಗೆ ನಿಯಮಾನುಸಾರ ವೇತನ ಸವಲತ್ತುಗಳನ್ನು ಕಲ್ಪಿಸಲಾಗುವುದು. ಆದರೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2002ರ ನಿಯಮಗಳ ಪ್ರಕಾರ ದೇವಾಲಯದ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇ.35 ರಷ್ಟು ಮೀರದಂತೆ ವೇತನ ಹಾಗೂ ಇನ್ನಿತರೇ ಸವಲತ್ತುಗಳನ್ನು ನೀಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವೇತನ ಶ್ರೇಣಿ ನಿಗದಿಪಡಿಸದೇ ಬಾಕಿ ಇರುವ 2568 ನೌಕರರುಗಳಿಗೆ ವೇತನ ಶ್ರೇಣಿ ಅಳವಡಿಸಿ,
ಇ	ಯಾವ ಕಾಲಮಿತಿಯಲ್ಲಿ ಮಂಜೂರು ಮಾಡಲಾಗುವುದು	

	ಆನಂತರ ಈಗಾಗಲೇ 5ನೇ ವೇತನ ಶ್ರೇಣಿ ಪಡೆದಿರುವ ಒಟ್ಟು 1111 ನೌಕರರುಗಳಿಗೆ ದೇವಾಲಯಗಳ ಆದಾಯ / ವೆಚ್ಚದ ಪೂರ್ಣವಾದ ಅಂಕಿ-ಅಂಶಗಳನ್ನು ಪಡೆದು ಪರಿಶೀಲಿಸಿ, ಪರಿಷ್ಕೃತ/ ಹೆಚ್ಚುವರಿ ವೇತನ ಸವಲತ್ತುಗಳನ್ನು ನೀಡುವ ಕುರಿತು ನಿಯಮಾನುಸಾರ ಪರಿಶೀಲಿಸಲಾಗುವುದು.

(ಸಂಖ್ಯೆ:ಕಂಇ 31 ಮುಸಪ್ರ 2019)

(ಪಿ.ಟಿ. ಪರಮೇಶ್ವರ ನಾಯ್ಕ)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ
ಮತ್ತು ಮುಜರಾಯಿ ಸಚಿವರು